# ಸಮ ಸಮಾಜದ ನೇತಾರ ಭಕ್ತಿ ಸಾಹಿತ್ಯದ ಅನನ್ಯ ಚೈತನ್ಯ: ದ್ವಿಭಾಷಿ ತತ್ವಪದಕಾರ ಕೈವಾರ ತಾತಯ್ಯ

**ಎಂ.ಎನ್. ಕವಿತಾ***

**DOI: https://doi.org/10.5281/zenodo.21793333**

**ABSTRACT**

ನಿರ್ಗುಣ ಭಕ್ತಿ ಮತ್ತು ತತ್ವಪದ ಪರಂಪರೆಯ ಮಹತ್ವದ ಕೊಂಡಿಯಾಗಿರುವ ಕೈವಾರ ತಾತಯ್ಯನವರ (ಯೋಗಿ ನಾರೇಯಣಪ್ಪ) ಜೀವನ ಮತ್ತು ಸಾಹಿತ್ಯಿಕ ಕೊಡುಗೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತತ್ವಪದಗಳನ್ನು ರಚಿಸಿದ ಇವರು, ಕೇವಲ ಭಕ್ತರಾಗಿರದೇ ಸಮಾಜ ಸುಧಾರಕರಾಗಿ, ಕಾಲಜ್ಞಾನಿಯಾಗಿ ಮತ್ತು ಜಾತಿ ವಿರೋಧಿಯಾಗಿ ಮೂಡಿಬಂದಿದ್ದಾರೆ. ತಮ್ಮ 'ಕಾಲಜ್ಞಾನ', 'ನಾದ ಬ್ರಹ್ಮಾನಂದ ನಾರೇಯಣಕವಿ ಶತಕ' ಮುಂತಾದ ಕೃತಿಗಳ ಮೂಲಕ ಮಾನವ ಕುಲ ಒಂದೇ ಎಂಬ ವಿಶ್ವಬಂಧುತ್ವದ ಸಂದೇಶವನ್ನು ಸಾರಿದ್ದಾರೆ. ಹುಟ್ಟಿನಿಂದ ಮೇಲು-ಕೀಳು ಎಂಬ ಮೌಢ್ಯವನ್ನು ಖಂಡಿಸಿ, ಜಾತಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಮನುಷ್ಯನು ಲೌಕಿಕ ಭೋಗಗಳನ್ನು ತ್ಯಜಿಸಿ, ಪರೋಪಕಾರಿಯಾಗಿ ಬಾಳುವ ಮೂಲಕ ತನ್ನಲ್ಲಿ ಅಡಗಿರುವ ತತ್ವಜ್ಞಾನವೆಂಬ 'ಕೋಟಿ ಧನ'ವನ್ನು ಅರಿಯಬೇಕು ಎಂಬ ಅವರ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಆಶಯಗಳನ್ನು ಈ ಬರಹವು ಎತ್ತಿ ತೋರಿಸುತ್ತದೆ.

**KEYWORDS:** ಕೈವಾರ ತಾತಯ್ಯ, ತತ್ವಪದ ಪರಂಪರೆ, ದ್ವಿಭಾಷಿ ಸಾಹಿತ್ಯ, ಸಮಾಜ ಸುಧಾರಣೆ, ವಿಶ್ವಬಂಧುತ್ವ.

* **ಡಾ. ಎಂ.ಎನ್. ಕವಿತಾ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ.

**ಭಕ್ತಿ – ಭಕ್ತಿ ಚಳವಳಿ:**

ಪೂಜಕ ಮತ್ತು ಪೂಜಿಸಲ್ಪಡುವವನ ನಡುವಿನ ಬಾಂಧವ್ಯ ಭಕ್ತಿಯ ರೂಪದಲ್ಲಿದೆ. ಆತ್ಮ ಸಂತೋಷಕ್ಕಾಗಿ ಇದ್ದ ಈ ಬಾಂಧವ್ಯ ಮನುಷ್ಯನನ್ನು ಚೇತೋಹಾರಿಯಾಗಿಡುವ ವಿಶಿಷ್ಟ ಶಕ್ತಿಯಾಗಿದೆ.

ಈ ಶಕ್ತಿ ವೈಯಕ್ತಿಕ ನೆಲೆಯ ಸಂತೋಷದಿಂದ ಸಾಮಾಜಿಕ ನೆಲೆಗೆ ಬಂದು ನಿಂತಾಗ ಭಕ್ತಿ ಚಳವಳಿ ಆರಂಭವಾಯಿತು. ಭಕ್ತಿಚಳವಳಿಯ ಮೊದಲ ಹೆಜ್ಜೆ ಆರಂಭವಾದದ್ದು ಉಳಿಗಮಾನ್ಯ ಪದ್ಧತಿಯ ವಿರುದ್ಧವಾಗಿ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ನಿರ್ಗುಣ ಭಕ್ತಿ ಚಳವಳಿಯು ಧರ್ಮ, ಜಾತಿ, ಲಿಂಗ ಇತ್ಯಾದಿ ಮಾನದಂಡಗಳಿಂದ ರೂಪಗೊಂಡಿದ್ದ ಅಸಮಾನತೆಯನ್ನು ವಿರೋಧಿಸುವುದು, ಸಮಾಜದ ಕಟ್ಟಕಡೆಯ ವ್ಯಕ್ತಿಯವರೆಗೆ ಎಲ್ಲರಿಗೂ ಒಂದೇ ಬಗೆಯ ಪ್ರೀತಿ, ಕಾಳಜಿ ಮತ್ತು ವಾತ್ಸಲ್ಯ ದೊರಕುವಂತೆ ಮಾಡುವುದು, ದೇವರು ಮತ್ತು ಮೋಕ್ಷವನ್ನು ಅರಿತುಕೊಳ್ಳಲು ಆಚರಣೆಗಿಂತ ಭಕ್ತಿ ಮುಖ್ಯ ಎಂದು ನಿರೂಪಿಸುವುದು ಭಕ್ತಿ ಚಳವಳಿಯ ಮುಖ್ಯ ಧ್ಯೇಯವಾಗಿತ್ತು.

ಭಕ್ತಿ ಚಳವಳಿ ತನ್ನ ಧ್ಯೇಯಗಳನ್ನು ಜನಮಾನಸಕ್ಕೆ ತಲುಪಿಸಲು ಮುಖ್ಯ ವಾಹಿನಿಯನ್ನಾಗಿ ಆಯ್ಕೆ ಮಾಡಿಕೊಂಡದ್ದು ಸಾಹಿತ್ಯವನ್ನು. ಹಾಗಾಗಿ ಭಕ್ತಿಸಾಹಿತ್ಯಕ್ಕೆ ಬಹುದೊಡ್ಡ ಪರಂಪರೆಯೊಂದು ಇದೆ. ಭಾರತದ ಉದ್ದಗಲಕ್ಕೂ ಭಕ್ತಿಯ ಮೂಲಕ ಸಾಹಿತ್ಯವನ್ನು, ಸಾಹಿತ್ಯದ ಮೂಲಕ ಭಕ್ತಿಯನ್ನು ಹಂಚಿದ ಮಹಾನ್ ಸಂತ ಕವಿಗಳು ಈ ನೆಲದಲ್ಲಿ ಮನೆಮಾತಾಗಿದ್ದಾರೆ.

**ಕರ್ನಾಟಕದಲ್ಲಿ ಭಕ್ತಿಸಾಹಿತ್ಯ:**

ಕರ್ನಾಟಕದ ಭಕ್ತಿ ಸಾಹಿತ್ಯ ಪರಂಪರೆಗೆ ಒಂದು ಐತಿಹಾಸಿಕ ನಡಿಗೆ ಇದೆ. ಭಕ್ತಿಸಾಹಿತ್ಯವು ಜನಸಾಮಾನ್ಯರ ಬದುಕಿನಲ್ಲಿ ಇನ್ನಿಲ್ಲದಂತಹ ಪ್ರಭಾವ, ಚೈತನ್ಯ ತುಂಬಿ ಸರ್ವರ ಉದ್ಧಾರಕ್ಕಾಗಿ ಶ್ರಮಿಸಿದ ಅನೇಕ ಸಂಗತಿಗಳನ್ನು ಕಾಣಬಹುದು. ಭಕ್ತಿಕಾವ್ಯವು ಪ್ರಾದೇಶಿಕ ಭಾಷೆಗಳ ರೂಪವನ್ನು ಹೊದ್ದು, ಪದ್ಯ, ಗೀತೆ, ಕೀರ್ತನೆ ಮೊದಲಾದ ಹೆಸರುಗಳಿಂದ ಜನರ ಬಳಿ ಹೋಗಿದ್ದರಿಂದಲೇ ಅದು ಹೆಚ್ಚು ಕ್ರಿಯಾಶೀಲತೆಯನ್ನು ಪಡೆಯಿತು. ಕಾಲಮಾನದ ಧಾರ್ಮಿಕ ಪ್ರಭಾವಕ್ಕೆ ತಕ್ಕಂತೆ ಭಕ್ತಿಯ ಮಾರ್ಗವು ನಡೆದದ್ದು ಇತಿಹಾಸದ ಉದ್ದಕ್ಕೂ ಸಾಮಾನ್ಯವೇ ಆದರೂ, ಜನಪರ ಭಕ್ತಿಸಾಹಿತ್ಯ ಮಾತ್ರ ಸರ್ವರ ಪರವಾಗಿರುವ ಉದಾಹರಣೆಗಳಾಗಿ ದೊರಕುತ್ತದೆ. ಹಾಗೆ ನೋಡಿದಾಗ ವಚನ ಸಾಹಿತ್ಯ ಪರಂಪರೆಯನ್ನು ಬೆಳೆಸಿದ ವೀರಶೈವ ಭಕ್ತಿ ಸಾಹಿತ್ಯವು ಜನಸಾಮಾನ್ಯರ ಮೇಲೆ ಗಾಢ ಪ್ರಭಾವ ಬೀರಿದ್ದನ್ನು ಕಾಣಬಹುದು. ಅದಾದ ನಂತರ ಕೀರ್ತನೆಕಾರರು ಈ ಸ್ಥಾನವನ್ನು ತುಂಬಿದರು. ಮುಂದಿನ ಬೆಳವಣಿಗೆಯಲ್ಲಿ ಭಕ್ತಿಯೆಂಬ ಶಕ್ತಿಯನ್ನು ತತ್ವಪದಕಾರರು ಮನೆಮನಗಳಿಗೆ ತಲುಪಿಸಿದರು. ತತ್ವಪದಕಾರರ ಗುರುತು ಅಲ್ಲಮನಿಂದ ಮೊದಲುಗೊಂಡು ಅಕ್ಕಮಹಾದೇವಿ,

ಪುರಂದರದಾಸರು, ಕನಕದಾಸರು, ಕೈವಾರ ನಾರೇಯಣಪ್ಪ, ಸಂತ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ ಹೀಗೆ ಈ ಪರಂಪರೆಯು ನಿರಂತರವಾಗಿ ಸಮೃದ್ಧ ಬೆಳವಣಿಗೆಯನ್ನು ಕಂಡಿದೆ.

**ತತ್ವಪದಕಾರರು ಎಂದರೆ:**

ತತ್ ಎಂದರೆ ಅದು, ತ್ವಂ ಎಂದರೆ ನಾನು ಎಂದರ್ಥ. ಅಂದರೆ, ನಾನು ಯಾರೆಂದು ಅರ್ಥ ಮಾಡಿಕೊಳ್ಳುವ ಹಂತ ಎಂದರ್ಥ. ದುಃಖ ನಿವಾರಣೆಗೆ ಅಗತ್ಯವಾದುದು ಜ್ಞಾನ. ಅಂತಹ ಜ್ಞಾನವನ್ನು ಸಂಪಾದಿಸಿ ಅದನ್ನು ಜನರ ಬಳಕೆಗೆ ತಲುಪಿಸಬಲ್ಲವರೇ ತತ್ವಜ್ಞಾನಿಗಳು. ಇವರು ಸಂತರು, ಸಾಧುಗಳು, ಯೋಗಿಗಳು ಎಂದೂ ಹೆಸರಾಗಿದ್ದಾರೆ. ಸಮಾಜವೊಂದರ ಒಳಿತು-ಕೆಡಕುಗಳನ್ನು ಮನದಟ್ಟು ಮಾಡಿಸಿ, ಮಾರ್ಗದರ್ಶನ ನೀಡುವ ಇವರು ತಮ್ಮ ರಚನೆಗಳ ಮೂಲಕ ಜನಮಾನಸದಲ್ಲಿ ಶಾಶ್ವತವಾದ ನೆಲೆಯನ್ನು ಕಂಡುಕೊಂಡಿದ್ದಾರೆ.

ತತ್ವಜ್ಞಾನಿಗಳು ನುಡಿದದ್ದು, ಹಾಡಿದ್ದು ತತ್ವಪದಗಳೆಂದು ಪ್ರಸಿದ್ಧವಾಗಿದೆ. ಕೀರ್ತನೆ, ಉಗಾಭೋಗ, ಸುಳಾದಿ ಮೊದಲಾದ ರೂಪಗಳಲ್ಲಿ ತತ್ವಜ್ಞಾನವನ್ನು ಹಂಚಿದ ಕೀರ್ತಿಗೆ ಇವರೆಲ್ಲಾ ಭಾಜನರಾಗಿದ್ದಾರೆ.

**ಕೈವಾರ ತಾತಯ್ಯನವರ ಪರಿಚಯ:**

'ಕೈವಾರ ತಾತಯ್ಯ' ಎಂಬ ಜನಪ್ರಿಯವಾದ ಹೆಸರಿನಿಂದ ಲೋಕಪ್ರಸಿದ್ಧರಾಗಿರುವ ಶ್ರೀ ಯೋಗಿನಾರೇಯಣ ಯತೀಂದ್ರರು, ಕೈವಾರದ ನಾರೇಯಣಪ್ಪ ಮೊದಲಾದ ಹೆಸರುಗಳಿಂದ ಕರೆಯಲ್ಪಟ್ಟಿದ್ದಾರೆ.

ಭಕ್ತಿ-ಜ್ಞಾನ-ವೈರಾಗ್ಯಗಳ ಅನುಷ್ಠಾನ, ಪ್ರಚಾರ ಹಾಗೂ ಬೋಧನೆಗಳ ಮೂಲಕ ಜನರ ಅಜ್ಞಾನ-ದುಃಖಗಳನ್ನು ದೂರ ಮಾಡಿದ ಸಮಾಜ ಸುಧಾರಕ ಕೈವಾರ ತಾತಯ್ಯ. ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಕೈವಾರ ಎಂಬ ಗ್ರಾಮದಲ್ಲಿ ಕ್ರಿ.ಶ. 1730ರಲ್ಲಿ ತಾತಯ್ಯನವರು ಜನಿಸಿದರು. ನೂರ ಹತ್ತು ವರ್ಷಗಳ ತುಂಬು ಜೀವನ ಜೀವಿಸಿದ್ದ ಈ ಯೋಗಿಗಳು 1840ರಲ್ಲಿ ಇಹಲೋಕ ತ್ಯಜಿಸಿದರು. ಅರ್ಧ ಶತಮಾನವನ್ನು ಲೌಕಿಕ ಜೀವನಕ್ಕೆ ಮೀಸಲಿಟ್ಟು ಉಳಿದ ಅರ್ಧ ಜೀವನವನ್ನು ಯೋಗಿಯಾಗಿ ಜೀವಿಸಿದ್ದ ತಾತಯ್ಯನವರು ಹುಟ್ಟಿದ್ದು ಬಳೆಗಾರ ಕುಲದಲ್ಲಿ. ಬಳೆಗಾರನಾಗಿ ವೃತ್ತಿಯನ್ನು ನಿರ್ವಹಿಸುತ್ತಲೇ ಆಧ್ಯಾತ್ಮದ ಹಾದಿ ಹಿಡಿದ ನಾರೇಯಣಪ್ಪನಿಗೆ ಲೌಕಿಕ ವ್ಯವಹಾರದ ಗೋಜಲೇ ವೈರಾಗ್ಯದ ಬದುಕಿಗೆ ಪ್ರೇರಣೆಯಾಯಿತು. ಈತನ ಲೌಕಿಕ ಬದುಕಿನ ಬಗೆಗೆ ಅನೇಕ ದಂತಕಥೆಗಳಿವೆ.

ಬದುಕಿನ ಭವಣೆಗಳಿಂದ ಗಟ್ಟಿಗೊಂಡ ಈತ ಈ ನೆಲದ ಮೊದಲ ದ್ವಿಭಾಷಿ ತತ್ವಪದಕಾರನಾಗಿದ್ದಾನೆ. ಕನ್ನಡ ಮತ್ತು ತೆಲುಗು ಭಾಷೆಗಳೆರಡರಲ್ಲಿಯೂ ಸಾಹಿತ್ಯ ರಚನೆ ಮಾಡಿದ್ದಾನೆ. 'ಅದ್ವೈತದ ದೀವಟಿಗೆಯನ್ನು ಹಿಡಿದ ಯೋಗಿ' ಎಂದು ಈತನನ್ನು ಗುರುತಿಸಲಾಗಿದೆ. ತಾನು ಬದುಕಿದ್ದ ನೆಲವು ಆಂಧ್ರ ಮತ್ತು ಕರ್ನಾಟಕ

ಬೆಸೆವ ಗಡಿಯಾದ್ದರಿಂದ, ಆ ಭಾಗದ ಜನರ ಬಳಕೆಯ ಭಾಷೆಯಾಗಿ ತೆಲುಗೇ ಹೆಚ್ಚಾಗಿದ್ದುದ್ದರಿಂದ, ಜನರಿಗಾಗೇ ಬರೆಯುತ್ತಿದ್ದ ನಾರೇಯಣಪ್ಪ ಕನ್ನಡ–ತೆಲುಗು ಭಾಷೆಗಳೆರಡರಲ್ಲೂ ತತ್ವಪದ ರಚಿಸಿದ್ದಾನೆ. ಕನ್ನಡದಲ್ಲಿ ಕಡಿಮೆ ಪ್ರಮಾಣದಲ್ಲಿ ಬರೆದಿದ್ದರೂ ವಿಷಯದಲ್ಲಿ ಅಗಾಧ ಆಲೋಚನೆ ಇದೆ. ಈತನ ತೆಲುಗು ರಚನೆಗಳೆಲ್ಲವೂ ಇಂದಿಗೆ ಅನುವಾದಗೊಂಡಿವೆ. 'ಈತ ಮೇಲುನೋಟಕ್ಕೆ ಭಾಗವತ ಪರಂಪರೆಯ ಭಕ್ತ ಹಾಗೂ ಕೀರ್ತನ ಸಾಹಿತ್ಯದ ಅನುಯಾಯಿಯಂತೆ ತೋರಿದರೂ ಭಕ್ತಿ ಮತ್ತು ಯೋಗ ಮಾರ್ಗಗಳ ಸಂಕರಿತ ತಾತ್ವಿಕತೆಯೊಂದನ್ನು ರೂಪಿಸಿಕೊಂಡಂತೆ ತೋರುತ್ತದೆ' ಎಂದು ಡಾ. ಎಂ. ಡಿ. ಒಕ್ಕುಂದ ಅವರು ಅಭಿಪ್ರಾಯಪಟ್ಟಿದ್ದಾರೆ.

**ತಾತಯ್ಯನವರ ಅನನ್ಯತೆ:**

ನಾರೇಯಣಪ್ಪನ ಯೋಗಿಯ ಬಾಳುವೆಯನ್ನು ಕೇಂದ್ರೀಕರಿಸಿ ನೋಡಿದಾಗ ಅಲ್ಲೊಬ್ಬ ಬ್ರಿಟಿಷರ ವಿರುದ್ಧ ದನಿ ತೆಗೆದು ಮಾತನಾಡಿದ ವೀರ ಕಾಣುತ್ತಾನೆ. ಆತ್ಮ ಶುದ್ಧೀಕರಣಕ್ಕೆ ಬೋಧನೆ ನೀಡಿದ ಬೋಧಕ ಸಿಗುತ್ತಾನೆ. ಸಮಾಜದ ಅಸಮಾನತೆಯ ಬಗೆಗೆ ಗಟ್ಟಿಯಾಗಿ ಮಾತನಾಡಿದ ಸಮಾಜ ಸುಧಾರಕ ದೊರಕುತ್ತಾನೆ. ಜಾತಿ ವೈಷಮ್ಯವನ್ನು ವಿರೋಧಿಸಿದ ಜಾತಿ ವಿರೋಧಿ ಬಯಲಾಗುತ್ತಾನೆ. ಸಂಸಾರದ ನಶ್ವರತೆಯನ್ನು, ಆತ್ಮದ ಸ್ಥಿರತೆಯನ್ನು ವಿವರಿಸುವ ನಿರೂಪಕ ಸಿಗುತ್ತಾನೆ. ಆರ್ಥಿಕ ಚಿಂತನೆಯನ್ನು ವಿವರಿಸಿದ ಅರ್ಥತಜ್ಞ ದೊರಕುತ್ತಾನೆ. ದೈವ–ಭಕ್ತರ ಸಂಬಂಧವನ್ನು ಪ್ರತಿಪಾದಿಸಿದ ಪ್ರತಿಪಾದಕ ಮತ್ತು ಭವಿಷ್ಯವನ್ನು ನುಡಿದ ಕಾಲಜ್ಞಾನಿ ಕಾಣುತ್ತಾನೆ. ಒಟ್ಟಾರೆಯಾಗಿ ಇಡೀ ಸಮಾಜವನ್ನು ಚಿಕಿತ್ಸಕ ಗುಣದಿಂದ ಶುಶ್ರೂಷೆ ಮಾಡಿದ ಸಾಮಾಜಿಕ ಸುಧಾರಕನೊಬ್ಬ ತತ್ವಪದಕಾರನ ರೂಪದಲ್ಲಿ ಕಾಣುತ್ತಾನೆ.

**ತಾತಯ್ಯನವರ ರಚನೆಗಳು:**

ಯೋಗಿ ನಾರೇಯಣರು ತಾಳೆಗರಿಯಲ್ಲಿ ರಚಿಸಿದ ಮೂಲ ಪಾಠಗಳನ್ನು ಕೈಪು ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಸಂಪಾದಿಸಿದ್ದಾರೆ. 'ಕಾಲಜ್ಞಾನ', 'ನಾದ ಬ್ರಹ್ಮಾನಂದ ನಾರೇಯಣಕವಿ ಶತಕ', 'ಸೂಕ್ಷ್ಮ ಭೀಮಲಿಂಗ ಶತಕ' ಹಾಗೂ 'ಪ್ರಚಂಡ ನಾರೇಯಣ ಕವಿ ಪದ್ಯಗಳು' ತಾತಯ್ಯನವರ ರಚನೆಗಳು.

ಮನುಷ್ಯ ಸಹಜವಾಗಿ ಬುದ್ಧಿ ಕಲಿಯದಿದ್ದರೆ, ಪ್ರಕೃತಿ ಮನುಷ್ಯನಿಗೆ ಬುದ್ಧಿ ಕಲಿಸದೆ ಬಿಡುವುದಿಲ್ಲ ಎಂಬುದರ ಬಗೆಗೆ ಅಪಾರವಾದ ನಂಬಿಕೆ ಇಟ್ಟಿದ್ದರು. ಆ ಹಿನ್ನೆಲೆಯಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

'ಕಾಲಜ್ಞಾನ'ದ ವಿಚಾರಗಳು ಇಂದಿಗೆ ಅದೆಷ್ಟೋ ಸತ್ಯವಾಗಿರುವುದಕ್ಕೆ ಆಧಾರಗಳಿವೆ. ಭೂಮಿಯನ್ನು ಮಾರಾಟದ ಸರಕಾಗಿಸಿ, ವ್ಯಥೆ ಪಡುತ್ತಿರುವ ಸಂಗತಿ, ಯುದ್ಧದ ಕರಾಳತೆ ಮೊದಲಾದವುಗಳ ಬಗೆಗೆ ತಾತಯ್ಯನವರು ಕೊಟ್ಟ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸದೇ ಇರುವುದೇ ನಮ್ಮ ಇಂದಿನ ಅಶಾಂತಿಯ ಬದುಕಿಗೆ, ಪ್ರಕೃತಿಯ ವಿಕೋಪದಂತಹ ಅನೇಕ ಸಮಸ್ಯೆಗಳಿಗೆ ಮೂಲವಾಗಿದೆ.

**ತಾತಯ್ಯನವರ ಸಾಹಿತ್ಯದ ವೈಶಿಷ್ಟ್ಯತೆ:**

ಮಾನವರೆಲ್ಲ ಒಂದೇ ಕುಲ, ನಾವೆಲ್ಲ ವಿಶ್ವಬಂಧುತ್ವ ಗಳಿಸಿ ಉತ್ತಮ ಭಾವನೆಯಿಂದ ಬದುಕಬೇಕೆಂದು ಹೇಳಿದ ತಾತಯ್ಯನವರು ಜಾತೀಯತೆಯ ಬಗ್ಗೆ ಎತ್ತುವ ಪ್ರಶ್ನೆಗಳು ಗಂಭೀರವಾದವು. ಜಾತಿ ಪದ್ಧತಿ, ಅಸ್ಪೃಶ್ಯತೆಯ ಆಚರಣೆಯ ಬಗೆಗೆ ಕಟುವಾಗಿ ಮಾತನಾಡಿರುವುದನ್ನು ಗಮನಿಸಬಹುದು. ಬಾಹ್ಯವಾಗಿ ಜಾತಿಗಳು ಬೇರೆ ಬೇರೆಯಾಗಿ ರೂಢಿಸಿಕೊಂಡಿದ್ದರೂ ಮನುಷ್ಯರಲ್ಲಿ ಕೀಳು–ಮೇಲುಗಳಿಲ್ಲ ಮಾನವಜಾತಿ ಒಂದೇ ಎಂದಿರುವ ಈ ತೆಲುಗು ಪದ್ಯವನ್ನೇ ಗಮನಿಸಿ:

**ಜಾತಿ ಕೊಂಚಂಬೈನ – ಜನುಲು ಯಿದ್ದರು ಲೇರು**
**ಜಾತಿ ವಿಚಾತುಲಿನಿ – ಯೆಂಚರಾಮ**
**ಅಂತ ವಕಟೇ ಜಾತಿ – ಮರಿ ವಕಟಿ ಲೇದುರಾ**

**ನಾದ ಬ್ರಹ್ಮಾನಂದ ನಾರೇಯಣ ಕವಿ.**

ಅಷ್ಟಕ್ಕೇ ನಿಲ್ಲದೇ ಜಗತ್ತಿನ ಜನರೆಲ್ಲ ಒಂದೇ ರೀತಿಯಾಗಿ ಜನಿಸುವರು ಇದರಲ್ಲಿ ಮೇಲು–ಕೀಳೇನು? ಎಂದು ಸಾರ್ವಕಾಲಿಕ ಸತ್ಯವನ್ನು ಹುಟ್ಟಿನಿಂದ ಶ್ರೇಷ್ಠ ಎಂದು ಬೀಗುವ ಜನರಿಗೆ ಚುಚ್ಚುವ ಹಾಗೆ ಪ್ರಶ್ನಿಸಿದ್ದಾರೆ.

**ಉಚ್ಚೆ ಬಾಗಿಲೊಳು ದೂರಿ ಬಂದರೀ ನರರು**
**ಉತ್ತಮ ಕುಲದವರು ಯಾರಿಲ್ಲ ಇಲ್ಲಿ**
**ಉತ್ತಮ ಕುಲವೆಂಬುದು ಬರಿ ಸುಳ್ಳು**
**ನಾದ ಬ್ರಹ್ಮಾನಂದ ನಾರೇಯಣ ಕವಿ**
**ಹೊಲೆಯನೆಂದೀ ಜನರು ಹೀಗಳೆವುದೇತಕೆ**
**ಹೊಲೆಯನ ಆತ್ಮ ಮಂದಿರದಿ**
**ಸಕಲ ದೇವ ವಿಹಾರಿ ಸದ್ಗುರುವು ಇರುವ**

**ನಾದ ಬ್ರಹ್ಮಾನಂದ ನಾರೇಯಣ ಕವಿ**

ಮಾನವಕುಲವೊಂದೇ, ಹೆಚ್ಚೆಂದರೆ ಈ ಜಗತ್ತಿನಲ್ಲಿ ಹೆಣ್ಣು–ಗಂಡೆಂಬ ಎರಡೇ ಕುಲಗಳಿವೆ ಎನ್ನುತ್ತಾ, ಮಾನವನ ಅಜ್ಞಾನದಿಂದ ಕುಲ–ಜಾತಿ ಜಗಳ ಸೃಷ್ಟಿಯಾಗಿದೆ. ಇದರಿಂದ ಹೊರಬರುವುದೇ ನಮ್ಮ ಧ್ಯೇಯವಾಗಬೇಕೆನ್ನುತ್ತಾ, ಮಾನವ ಸಮಾಜದ ಸುಖಿ ಸಿದ್ಧಾಂತವನ್ನು ಹೇಳಿದ್ದಾರೆ.

**ಏ ಜಾತಿ ಫಲಮೇನಾ ಮುದಿರಿನಪ್ಪುಡು ತೀಪು**
**ಕಾಯಲಪ್ಪುಡು ವಗರು– ಚೇದು ಪುಲುಸು**
**ಮಾನಮಡು ಮುದಿರಿತೇ ಮರಿ ಮಂಕು ಚೇದಯಾ**

**ನಾದ ಬ್ರಹ್ಮಾನಂದ ನಾರೇಯಣ ಕವಿ.**

ಯಾವ ಜಾತಿಯ ಫಲವಾದರೂ ವಗರು, ಕಹಿ ಮತ್ತು ಹುಳಿ ಗುಣಗಳನ್ನು ಹೊಂದಿರುತ್ತದೆ. ಕಾಲಾನಂತರದಲ್ಲಿ ಪಕ್ವವಾದಾಗ ಮಾಗಿ ಸಿಹಿಯಾಗುತ್ತದೆ. ಆದರೆ ಮಾನವನು ವಯಸ್ಸಾದಂತೆ ಅಜ್ಞಾನದ ಮಂಕು ಕವಿದು ಕಹಿಯಾಗುತ್ತಾನೆಂಬುದೇ ದುರಂತ.

ಮಾತನಾಡದ ವೃಕ್ಷವು ತನಗಾಗಿ ಒಂದೂ ಹಣ್ಣನ್ನು ಇಟ್ಟುಕೊಳ್ಳದೆ,

ಪರೋಪಕಾರಿಯಾಗುತ್ತದೆ. ಆದರೆ ಮಾನವ ಲೋಭದಿಂದ ಕಹಿಯಾಗುತ್ತಾನೆ. ಮರದಂತೆ ಸಿಹಿಯಾಗಿ ಪರೋಪಕಾರಿಯಾಗಿ ಬಾಳುವೆ ಮಾಡೆಂದು ಸ್ವಾರ್ಥಿ ಮಾನವನಿಗೆ ವಿವೇಕ ಹೇಳುತ್ತಿದ್ದಾರೆ.

**ತಲ ಕಾಯಂಡ ಕೊಂಡ ಯಾವದಿ ಲೇದು**
**ಕೊಂಡಲೋ ಮನ್ನದಿ ಕೋಟಿ ಧನಮು**
**ವೆಳ್ಳ ತೀಸಿನವಾಡು ಯೆವ್ವರು ಲೇರುರಾ**
**ನಾದ ಬ್ರಹ್ಮಾನಂದ ನಾರೇಯಣ ಕವಿ**

ತಲೆಯಂತಹ ಬೆಟ್ಟ ಯಾವುದೂ ಇಲ್ಲ. ಬೆಟ್ಟದಲ್ಲಿ ಕೋಟಿ ಕೋಟಿ ಧನವಿದೆ. ಹೊರತೆಗೆವವರು ಯಾರೂ ಇಲ್ಲ. ಯೋಗಿಯ ಸಾಧನೆಯ ತುದಿಯು ತಲೆಯೇ ಆಗಿರುವುದರಿಂದ ಹಾಗೂ ದೇಹದಲ್ಲಿ ಬ್ರಹ್ಮಸಾಕ್ಷಾತ್ಕಾರವನ್ನು ಉಂಟುಮಾಡುವ ಸಹಸ್ರ ಅರಿವು ಮಸ್ತಕದಲ್ಲಿ ಇರುವುದರಿಂದ ದೇಹಕ್ಕೆ ಐಶ್ವರ್ಯವಾಗಿರುವ ತಲೆಗೆ ಸಮಾನವಾದ ಬೆಟ್ಟ ಮತ್ತೊಂದಿಲ್ಲ. ಈ ಬೆಟ್ಟದಲ್ಲಿ ಕೋಟಿ ಧನವಿದೆ. ಈ ಧನವನ್ನು ತೆಗೆಯುವವರು ಯಾರು? ತಲೆಯು ಶರೀರಕ್ಕೆ ಭೂಷಣಪ್ರಾಯವಾದುದು ಇಲ್ಲಿರುವ ಧನವನ್ನು ಬಳಸಿಕೊಂಡರೆ ಕೋಟಿ ಕೋಟಿ ಧನ ಸಂಪಾದನೆ ಸಾಧ್ಯವೆಂಬುದು ಲೌಕಿಕ ಅರ್ಥ.

ಲೌಕಿಕ ಸುಖಗಳನ್ನೇ ನಿತ್ಯವೆಂದು ಭ್ರಾಂತಿಯಿಂದ ನಂಬಿ ಭೋಗಸಾಧನೆಯಲ್ಲೇ ಮಗ್ನರಾದರೆ, ಈ ತಲೆ ಎಂಬ ಬೆಟ್ಟದಲ್ಲಿರುವ ಕೋಟಿಧನ ಹೊರ ತೆಗೆಯಲು ಸಾಧ್ಯವಿಲ್ಲ. ಮನುಷ್ಯ ಜೀವನದ ಸಾರ್ಥಕತೆ ಇರುವುದು ಕೋಟಿ ಧನ ಸಂಪಾದನೆಯಲ್ಲಿ ಎಂಬುದು ನಾರೇಯಣ ಕವಿಯ ಅಭಿಮತ.

ತತ್ವಜ್ಞಾನದ ಆನಂದ ಎಂಬುದು ಬೆಲೆ ಕಟ್ಟಲಾಗದ ಐಶ್ವರ್ಯವಾಗಿರುವುದರಿಂದ ಅದು ಕೋಟಿಧನ. ಯೋಗಶಾಸ್ತ್ರಗಳಿಂದ ಹಾಗೂ ಗುರುಗಳ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದವರೇ ಯೋಗಿಗಳು. ತತ್ವಾನುಸಂಧಾನದಿಂದ ಪ್ರಾಪ್ತವಾಗುವ ಬ್ರಹ್ಮಾನಂದವು ಜೀವನ್ಮುಕ್ತ ಸ್ಥಿತಿಯಾಗಿದೆ ಎಂಬುದು ಆಧ್ಯಾತ್ಮಿಕ ಅರ್ಥ. ಯೋಗದ ಮೂಲಕ ತತ್ವವನ್ನು, ಸಾಹಿತ್ಯವನ್ನು ಜನರಿಗೆ ತಲುಪಿಸಿದ ನಾರೇಯಣಪ್ಪ ಎಲ್ಲ ಕಾಲಕ್ಕೂ ಸಲ್ಲುವ ಆಶಾವಾದಿ.

ಹೀಗೆ ಜನಮುಖಿ ಆಲೋಚನೆಗಳಿಂದ ಕನ್ನಡ–ತೆಲುಗು ಭಾಷೆಗಳೆರಡರಲ್ಲೂ ಕೀರ್ತನೆ ಮತ್ತು ತತ್ವಪದಗಳನ್ನು ರಚಿಸಿರುವ ಕೈವಾರ ನಾರೇಯಣಪ್ಪನ ಆಲೋಚನೆಯಲ್ಲಿ ಸಮಸಮಾಜದ ಕನಸೇ ತುಂಬಿವೆ. ಆಧ್ಯಾತ್ಮಿಕ ಚಿಂತನೆಗಳ ಮೂಲಕ ಲೋಕದ ಸ್ವಾಸ್ಥ್ಯಕ್ಕಾಗಿ ಮಿಡಿದ ಈತನ ಚಿಂತನೆಗಳು ಕನ್ನಡ ನಾಡಿನ ಜನರ ಭಾವಕೋಶದಲ್ಲಿ ಸದಾ ಸ್ಥಾಯಿಯಾಗಿ ಉಳಿಯುತ್ತವೆ.